ಅ) ಈ ಪೈಕಿ ನಿರ್ಮೂಲನ ಮಾಡಿದ ಕೊಳಚೆ ಪ್ರದೇಶಗಳೆಷ್ಟು?

ಇ) ಕಳೆದ ಐದು ವರ್ಷಗಳಲ್ಲಿ ಕೊಳಚೆ ಪ್ರದೇಶಗಳ ಕುಟುಂಬಗಳಿಗೆ ಕಟ್ಟಿ ಕೊಟ್ಟಿರುವ ಮನೆಗಳ ಸಂಖ್ಯೆ ಎಷ್ಟು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಸವದತ್ತಿ ತಾಲ್ಲೂಕಿನಲ್ಲಿ ೫ ಕೊಳಚೆ ಪ್ರದೇಶಗಳಿವೆ, ಅವುಗಳೆಂದರೆ ,

೧ ವಾರ್ಡ ನಂ.೨ ಕಿಲ್ಲಾ ಹತ್ತಿರದ ಕೊಳಚೆ ಪ್ರದೇಶ.

೨ ಹರಿಜನಕೇರಿ (ಹರಿಜನವಾಡ) ಕೊಳಚೆ ಪ್ರದೇಶ

೩ ವಾರ್ಡ ನಂ. ೪ರಲ್ಲಿನ ಎ.ಪಿ.ಎಂ.ಸಿ. ಯಾರ್ಡ ಗೌರಿಕೆರೆ ಕೊಳಚೆ ಪ್ರದೇಶ.

೪. ವಾರ್ಡ ನಂ.೩ ಶಂಕರಲಿಂಗ ದೇವಸ್ಥಾನದ (ಸವಳಬಾವಿ) ಹತ್ತಿರದ ಕೊಳಚೆ ಪ್ರದೇಶ.

೫. ವಾರ್ಡನಂ.೪ ಹೊಸಪೇಟೆ ಮತ್ತು ಬಾಲೇಶನವರ ಓಣಿ ಕೊಳಚೆ ಪ್ರದೇಶ.

ಆ) ಯಾವುದೇ ಕೊಳಚೆ ಪ್ರದೇಶಗಳನ್ನು ನಿರ್ಮೂಲನ ಮಾಡಿರುವುದಿಲ್ಲ.

ಇ) ಈ ಭಾಗದ ಕೊಳಚೆ ನಿವಾಸಿಗಳಿಗೆ ಯಾವುದೇ ಮನೆಗಳನ್ನು ಕಟ್ಟಿಕೊಟ್ಟಿರುವುದಿಲ್ಲ.

ಸವದತ್ತಿ ಪಟ್ಟಣದಲ್ಲಿ ಒಳಚರಂಡಿ ವ್ಯವಸ್ಥೆ

600- ಶ್ರೀ ಚಂದ್ರಶೇಖರ್ ಎಂ.ಮಾಮನಿ(ಪರಸಗಡ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯ ಸವದತ್ತಿ ಪಟ್ಟಣದಲ್ಲಿ ಒಳಚರಂಡಿ ವ್ಯವಸ್ಥೆಯು ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ, ಒಳಚರಂಡಿ ವ್ಯವಸ್ಥೆಯು ಯಾವಾಗ ಕೈಗೊಳ್ಳಲಾಗುವುದು?

ಇ) ಸದರಿ ಒಳಚರಂಡಿಯನ್ನು ಮಾಡಲು ನೀಲಿ ನಕ್ಷೆ ತಯಾರಿಸಲಾಗಿದೆಯೇ? ಹಾಗೂ ಅದರ ಅಂದಾಜು ವೆಚ್ಚ ಎಷ್ಟು? ಈ ಕಾರ್ಯವನ್ನು ೧೯೯೫-೯೬ನೇ ಸಾಲಿನಲ್ಲಿ ಪ್ರಾರಂಭಿಸಲಾಗುವುದೇ?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಹೌದು.

ಆ) ಗ್ರಾಮಸಾರ ಶುದ್ದೀಕರಣ ಘಟಕಕ್ಕೆ ಬೇಕಾಗುವ ೮ ಎಕರೆ ಜಮೀನನ್ನು ಬಿಡುಗಡೆ ಮಾಡಿಕೊಟ್ಟು ಶುದ್ದೀಕರಣಕ್ಕೆ ಹಾಗೂ ಉಳಿದ ಪ್ರದೇಶಗಳಿಗೆ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸುವ ಅಂದಾಜಿಗೆ ಪುರಸಭೆಯ ಅಂದಾಜಿನ ಶೇ. ೨೦ ರಷ್ಟು ಪಂತಿಗೆ ಹಣ ಒದಗಿಸಿದಲ್ಲಿ ಶೇ. ೫೦ರಷ್ಟನ್ನು

ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದು ಕೆಲಸ ಕೈಗೊಳ್ಳಲಾಗುವುದು.

೫) ಶುದ್ದೀಕರಣ ಘಟಕಕ್ಕೆ ಜಮೀನನ್ನು ಬಿಡುಗಡೆ ಮಾಡಿದ ನಂತರ ಅಂದಾಜನ್ನು ತಯಾರಿಸಲು ಕ್ರಮ ಕೈಗೊಳ್ಳಲಾಗುವುದು.

ಪರಿಸರ ಮಾಲಿನ್ಯಕ್ಕೆ ಕಾರಣವಾಗಿರುವ ಉದ್ಯಮಗಳನ್ನು ಮುಚ್ಚುವುದು

೬೦೭ - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಪರಿಸರ ಮತ್ತು ಜೀವಿಶಾಸ್ತ್ರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪರಿಸರ ಮಾಲಿನ್ಯಕ್ಕೆ ಕಾರಣವಾಗಿರುವ ರಾಜ್ಯದ ಯಾವ ಯಾವ ಉದ್ಯಮಗಳನ್ನು ಮುಚ್ಚಲು ನೋಟೀಸ್ ನೀಡಲಾಗಿದೆ.

ಆ) ಹರಿಹರ ಪಾಲಿಪೈಬರ್ಸ್ ಉದ್ಯಮದಿಂದ ಹಲವಾರು ವರ್ಷಗಳಿಂದ ಪರಿಸರ ಮಾಲಿನ್ಯವಾಗುತ್ತಿದ್ದರೂ ಸಹ ಈ ಉದ್ಯಮದ ಮೇಲೆ ಯಾವುದೇ ಕ್ರಮಗಳನ್ನು ಕೈಗೊಳ್ಳದೆ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರು ಉದ್ಯಮದವರೊಡನೇ ಶಾಮೀಲಾಗಿರುವುದು ನಿಜವೇ.

ಇ) ಹಾಗಿದ್ದಲ್ಲಿ ತೀವ್ರ ಪರಿಸರ ಮಾಲಿನ್ಯಕ್ಕೆ ಕಾರಣವಾಗಿರುವ ಹರಿಹರ ಪಾಲಿಪೈಬರ್ಸ ಉದ್ಯಮವನ್ನು ಮುಚ್ಚಲು ಯಾವ ಕ್ರಮಗಳನ್ನು ಕೈಗೊಳ್ಳಲಾಗುವುದು?

ಶ್ರೀ ಪಿ.ಸಿ ಸಿದ್ದನಗೌಡರ್ (ಸಕ್ಕರೆ,ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ರಾಜ್ಯ ಸಚಿವರು) :

ಅ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ ೧೯೭೪ರಡಿಯಲ್ಲಿ ೨೯ ಉದ್ದಿಮೆಗಳಿಗೂ ಹಾಗೂ ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ ೧೯೮೧ ರಡಿಯಲ್ಲಿ ೨೨ ಉದ್ದಿಮೆಗಳಿಗೂ ಮುಚ್ಚುವ ಆಜ್ಞೆಯನ್ನು ನೀಡಿರುತ್ತವೆ. (ಪಟ್ಟಿ ಲಗತ್ತಿಸಲಾಗಿದೆ)

ಆ) -ಇಲ್ಲ-

ಉದ್ದಿಮೆಯಿಂದ ಆಗುತ್ತಿರುವ ಮಾಲಿನ್ಯವನ್ನು ನಿಯಂತ್ರಿಸಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಿದೆ.

ಇ) ಕಾರ್ಖಾನೆಯನ್ನು ಮುಚ್ಚಿಸುವ ಪ್ರಸಂಗ ಉದ್ಭವಿಸಿರುವುದಿಲ್ಲ.